ಆ) ೧. ಮಂಗಳೂರಿನ ನಾಗರೀಕರು ವೈಮಾನಿಕ ಹಾರಾಟ ತರಬೇತಿಯ ಸೌಲಭ್ಯ ಪಡೆಯಲು ತರಬೇತಿ ಶಾಲೆಯನ್ನು ಮಂಗಳೂರಿನಲ್ಲಿ ಪ್ರಾರಂಭಿಸಲು ೧೯೮೨ನೇ ಡಿಸೆಂಬರ್‌ನಲ್ಲಿ ಮಂಜೂರಾತಿಯನ್ನು ನೀಡಲಾಯಿತು. ಮತ್ತು ಈ ಶಾಖೆಯನ್ನು ದಿನಾಂಕ. ೧೪-೧೧-೮೪ರಂದು ಉದ್ಘಾಟಿಸಲಾಗಿ ಅಂದಿನಿಂದ ೧೮೫೫ನೇ ಫೆಬ್ರವರಿ ತನಕ ವೈಮಾನಿಕ ಹಾರಾಟ ತರಬೇತಿಯನ್ನು ನಡೆಸಿತು. ೧೯೮೫ನೇ ಮಾರ್ಚ್‌ನಲ್ಲಿ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಫ್ಲೈಟ್ ಇನ್‌ಸ್ಟ್ರಕ್ಟರ್ ಇನ್‌ಚಾರ್ಜ್ ಇವರು ರಾಜೀನಾಮೆ ನೀಡಿದ್ದರಿಂದ ತರಬೇತಿ ಕಾರ್ಯಕ್ರಮಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.

೨. ಈಗ ಖಾಲಿಯಿರುವ ಫ್ಲೈಟ್ ಇನ್‌ಸ್ಟ್ರಕ್ಟರ್ ಇನ್‌ಚಾರ್ಜ್ ಹುದ್ದೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ ೧೯೭೭ (ಸಾಮಾನ್ಯ ನೇಮಕಾತಿ) ನಿಯಮ ೧೫ (೧) (ಬಿ) (ii) ಪ್ರಕಾರ ಗುತ್ತಿಗೆ ಆಧಾರದ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಈ ಹುದ್ದೆಗೆ ನೇಮಕಾತಿ ಆದ ತಕ್ಷಣ ಮುಚ್ಚಲಾಗಿರುವ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಮಂಗಳೂರು ಶಾಖೆಯನ್ನು ತೆರೆಯಲು ಕ್ರಮ ತೆಗೆದುಕೊಳ್ಳಲಾಗುವುದು.

ಶಾಶ್ವತ ದಸರಾ ಮತ್ತು ಪ್ರದರ್ಶನಾಲಯ

೧೬೬೩. ಶ್ರೀ ಪಿ. ಎಂ. ಚಿಕ್ಕಬೋರಯ್ಯ(ಚಾಮರಾಜ).— ಮಾನ್ಯ ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ಶಾಶ್ವತ ದಸರಾ ವಸ್ತು ಪ್ರದರ್ಶನಾಲಯ ನಿರ್ಮಿಸಲು ಸರ್ಕಾರದಪರ ಉದ್ದೇಶವೇನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಅದರ ವಿಸ್ತೀರ್ಣ ಹಾಗೂ ಅಂದಾಜು ವೆಚ್ಚವೆಷ್ಟು ?

ಇ) ನಿರ್ಮಾಣ ಕೆಲಸ ಯಾವಾಗ ಪ್ರಾರಂಭವಾಗುವುದು ಹಾಗೂ ಅದನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).

ಅ) ಹೌದು.

ಆ) ವಿಸ್ತೀರ್ಣ ೩೨.೪೦ ಹೆಕ್ಟೇರ್ (೮೦ ಎಕರೆ) ಅಂದಾಜು ವೆಚ್ಚ ೬ ಕೋಟಿ ರೂ.ಗಳು

ಇ) ಈ ಬಗ್ಗೆ ಯಾವ ನಿರ್ಧಾರವೂ ಇದುವರೆಗೂ ಕೈಗೊಂಡಿರುವುದಿಲ್ಲ.

ಬೆಂಗಳೂರು ಅರಮನೆಯ ಬಗ್ಗೆ

೧೬೧೩. ಶ್ರೀ ವೇದಾಂತ ಹವಿಗೌಡ(ಕೃಷ್ಣರಾಜ) —ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನಲ್ಲಿರುವ ಅರಮನೆ ಮತ್ತು ಅದಕ್ಕೆ ಸೇರಿದ ಸುತ್ತು ಮುತ್ತಲಿನ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಈಗ ಈ ಪ್ರದೇಶದ ಮಾಲೀಕರು ಯಾರು ಮತ್ತು ಯಾರ ಅಧೀನದಲ್ಲಿದೆ ?

ಇ) ರಾಜ್ಯ ಸರ್ಕಾರವು ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಏನಾದರೂ ಕ್ರಮಗಳನ್ನು ಕೈಗೊಂಡಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ಒಟ್ಟು ವಿಸ್ತೀರ್ಣ—೪೫೪ ಎಕರೆ ೦೦ ಗುಂಟೆ, ಕಟ್ಟಡದ ವಿಸ್ತೀರ್ಣ—೨೫ ಎಕರೆ ೩೧ ಗುಂಟೆ ಖಾಲಿ ಜಮೀನಿನ ವಿಸ್ತೀರ್ಣ—೪೨೮ ಎಕರೆ ೦೯ ಗುಂಟೆ

ಅ) ಈ ಪ್ರದೇಶದ ಖಾತೆದಾರರು ಮತ್ತು ಅನುಭವದಾರರಂ

೧) ಮೆ. ಚಾಪಂಡಿ ಹೋಟೆಲ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಮತ್ತು

೨) ಮೆ. ವೆಂಕಟೇಶ್ವರ ರಿಯಲ್ ಎಸ್ಟೇಟ್ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇವರಂ ಆಗಿರುತ್ತಾರೆ.

ಇ) ಭೂ ಸ್ವಾಧೀನ ಕಾಯ್ದೆಯ ೪ (೧)ರ ಪ್ರಕರಣದ ಪ್ರಕಾರ ಸಾರ್ವಜನಿಕರ ಉಪಯೋಗ ಕ್ಕಾಗಿ ಮತ್ತು ರಾಜ್ಯದ ಕಲೆ ಮತ್ತು ಐತಿಹಾಸಿಕ ಪರಂಪರೆಯನ್ನು ಸಂರಕ್ಷಿಸುವುದಕ್ಕೋಸ್ಕರ ಈ ಪ್ರದೇಶವನ್ನು ಸರ್ಕಾರ ಸ್ವಾಧೀನ ಪಡಿಸಿಕೊಳ್ಳಲು ದಿನಾಂಕ ೧೨-೨-೧೯೮೬ ರಂದು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿದೆ ಹಾಗೂ ದಿನಾಂಕ ೯-೯-೧೯೮೭ರಂದು ಭೂ ಸ್ವಾಧೀನ ಕಾಯ್ದೆಯ ಪ್ರಕರಣದ ೬ (೧)ರ ಅನ್ವಯ ಅಂತಿಮ ಅಧಿಸೂಚನೆಯಂನ್ನು ಹೊರಡಿಸಲಾಗಿದೆ. ನಿಯಮಗಳಿಗನುಸಾರವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಾಗರೀಕ ಸೌಲಭ್ಯಗಳಿಗೆ ಜಮೀನಂ ಮೀಸಲಿರಂವ ಬಗ್ಗೆ

೧೫೭೩. ಶ್ರೀ ಆರ್. ವೆಂಕಟಾಚಪಯ್ಯ(ಮುಳಬಾಗಿಲು).—ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಾಗರೀಕ ಸೌಲಭ್ಯಗಳಿಗಾಗಿ (ಸಿವಿಕ್ ಅಮೆನಿಟೀಸ್‌ಗಾಗಿ) ೧೯೮೫ನೇ ಇಸವಿಯಿಂದ ಇಂದಿನವರೆಗೆ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಮೀಸಲಿಟ್ಟಿರುವ ವಿಸ್ತೀರ್ಣವೆಷ್ಟು ? (ವಿವಿಧ ಬಡಾವಣೆಗಳ ವಿವರಗಳನ್ನೊದಗಿಸುವುದು)

ಆ) ಅವುಗಳಲ್ಲಿ ಕಳೆದ ಮೂರು ವರ್ಷಗಳಿಂದ ಹಿಂದೂ ದೇವಾಲಯಗಳಿಗಾಗಿ ನಿಗದಿಪಡಿಸಿರುವ ಸ್ಥಳವೆಷ್ಟು ಹಾಗೂ ಇತರೆ ಕೋಮಿನವರಿಗೆ ನಿಗದಿಪಡಿಸಿದ ಸ್ಥಳವೆಷ್ಟು ?

ಇ) ಕಳೆದ ಮೂರು ವರ್ಷಗಳಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟ ಸ್ಥಳಗಳಲ್ಲಿ ಹಿಂದೂ ದೇವಾಲಯಗಳ ನಿರ್ಮಾಣಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅಡಚಣೆಯನ್ನೇನಾದರೂ ಉಂಟು ಮಾಡಿರುವರೇ ?

ಈ) ಹಾಗಿದ್ದಲ್ಲಿ ಅವುಗಳಿಗೆ ಕಾರಣವೇನು ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).—

ಅ) ಒಟ್ಟು ೧೯೮೫ನೇ ಇಸವಿಯಿಂದ ಇಂದಿನವರೆಗೆ ರಚಿಸಿರುವ ಬಡಾವಣೆಗಳಲ್ಲಿ ೧೭೪ ಎಕರೆ ೨೨ ಗುಂಟೆ ಪ್ರದೇಶವನ್ನು ಪೌರಸೌಲಭ್ಯ ನಿವೇಶನಕ್ಕಾಗಿ ಮೀಸಲಾಗಿರಿಸಲಾಗಿದೆ.

ಆ) ೧೯೮೫ ರಿಂದ ಈಚಿನ ಬಡಾವಣೆಗಳಲ್ಲಿ ದೇವಾಲಯಗಳಿಗಾಗಿ ಪ್ರದೇಶವನ್ನು ಮೀಸಲಾಗಿರಿಸಿಲ್ಲ,

ಇ) ಇಲ್ಲ.

ಈ) ಉದ್ಭವಿಸಿರುವುದಿಲ್ಲ.